	2002-03 (M.T.)	2003-04 (M.T.)
ಕ.ಅ.ಕೈ.ನಿ.	25,000	15,000
ಕ.ಅ.ಅ.ನಿ.	10,000	8,800
ಮೈ.ಕಾ.ಕಾ.ನಿ.	30,400	15,000
ಒಟ್ಟು	65,400	38,800

ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಅಭಿವೃದ್ಧಿ

1206(718) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳೆಷ್ಟು?

2) ಅವುಗಳ ಅಭಿವೃದ್ಧಿಗಾಗಿ 2001-02 ಹಾಗೂ 2002-2003ರ ಸಾಲಿನಲ್ಲಿ ಎಷ್ಟು ಪ್ರಸ್ತಾವನೆಗಳು ಸರ್ಕಾರದ ಮುಂದಿರುತ್ತವೆ? (ವಿವರ ನೀಡುವುದು).

ಶ್ರೀಮತಿ ಸುಮಾವಸಂತ್(ಮುಜರಾಯಿ ರಾಜ್ಯ ಸಚಿವರು):

1) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 173 ಮುಜರಾಯಿ ದೇವಾಲಯಗಳು ಇರುತ್ತದೆ.

2) 2001-2002 ಮತ್ತು 2002-03ನೇ ಸಾಲಿನಲ್ಲಿ ಈ ಕೆಳಕಂಡ ದಾವಾಲಯಗಳಿಗೆ ಅನುದಾನ ಕೋರಿ ಪ್ರಸ್ತಾವನೆಗಳು ಸರ್ಕಾರದಲ್ಲಿ ಸ್ವೀಕೃತವಾಗಿರುತ್ತವೆ.

1. ಶ್ರೀ ವೀರಭದ್ರ ಸ್ವಾಮಿ ದೇವಾಲಯ, ಸಿದ್ಲೀಪುರ ಗ್ರಾಮ, ಶಿವಮೊಗ್ಗ.	ಪುನರ್‌ನಿರ್ಮಾಣಕ್ಕೆ ರೂ. 25,000-00
2. ಶ್ರೀ ಬಿಲ್ಲೇಶ್ವರ ದೇವಾಲಯ, ಹುಂಚಾ ಗ್ರಾಮ, ಹೊಸನಗರ ತಾ.	ಜೀರ್ಣೋದ್ಧಾರಕ್ಕೆ ರೂ. ಗರಿಷ್ಟ ರೂ. 30,000-00

ಶಿವಮೊಗ್ಗ ತಾಲ್ಲೂಕುವ್ಯಾಪ್ತಿಯಲ್ಲಿ ಅರಣ್ಯೇತರ ಉದ್ದೇಶಕ್ಕಾಗಿ ಅರಣ್ಯ ಭೂಮಿಯನ್ನು ಬಿಡುಗಡೆಗೊಳಿಸುವುದು

1207(719) ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ(ಶಿವಮೊಗ್ಗ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ತಾಲ್ಲೂಕು ವ್ಯಾಪ್ತಿಯಲ್ಲಿ ನೀರಾವರಿ ಹಾಗೂ ವಸತಿ ಉದ್ದೇಶಕ್ಕಾಗಿ ಎಷ್ಟು ಎಕರೆ ಅರಣ್ಯ ಬೂಮಿಯನ್ನು ಅರಣ್ಯೇತರ ಉದ್ದೇಶಕ್ಕಾಗಿ ಬಿಡುಗಡೆಗೊಳಿಸಲು ಸರ್ಕಾರದಿಂದ ಕ್ರಮ ಕೈಗೊಳ್ಳಲಾಗಿದೆ?

ಆ) ಹಾಗಿದ್ದಲ್ಲಿ, ಈ ಕಾರ್ಯ ಯಾವ ಹಂತದಲ್ಲಿದೆ; (ವಿವರ ನೀಡುವುದು)?

ಶ್ರೀ ಕೆ.ಹೆಚ್. ರಂಗನಾಥ್(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಶಿವಮೊಗ್ಗ ತಾಲ್ಲೂಕಿನಲ್ಲಿ ಅರಣ್ಯೇತರ ಉದ್ದೇಶಕ್ಕಾಗಿ ನೀರಾವರಿ ಹಾಗೂ ವಸತಿ ಯೋಜನೆಗೆ ಅರಣ್ಯ ಪ್ರದೇಶವನ್ನು ಈ ಕೆಳಗಿನಂತೆ ಬಿಡುಗಡೆಗೊಳಿಸಲಾಗಿದೆ.

1. ನೀರಾವರಿ ಯೋಜನೆಗೆ:

ಅ) ಜರಗಲ್ ಹಳ್ಳ 3.2 ಹೆಕ್ಟೇರ್

ಆ) ತುಂಗಾ ಮೇಲ್ದಂಡೆ ಯೋಜನೆಗೆ 449.55 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಬಿಡುಗಡೆಗೊಳಿಸುವುದರ ಕುರಿತು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಈ ಪೈಕಿ 49.26 ಹೆಕ್ಟೇರ್ ಪ್ರದೇಶವು ವನ್ಯಜೀವಿ ಧಾಮ, ಶೆಟ್ಟಿಹಳ್ಳಿ ವ್ಯಾಪ್ತಿಗೆ ಒಳಪಡುತ್ತದೆ. ಕೇಂದ್ರ ಸರ್ಕಾರದಲ್ಲಿ ಸದರಿ ಪ್ರಸ್ತಾವನೆಯು ಬಾಕಿ ಇರುತ್ತದೆ.

2. ವಸತಿಗಾಗಿ ಯಾವುದೇ ಅರಣ್ಯ ಭೂಮಿಯನ್ನು ನೀಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶಿವಮೊಗ್ಗ ತಾಲ್ಲೂಕಿನಲ್ಲಿ ಆಯುರ್ವೇದ ಸಸ್ಯಗಳ ಅಶ್ವಿನಿವನ ಅಭಿವೃದ್ಧಿ

1208(720) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ) : ಮಾನ್ಯ ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ತಾಲ್ಲೂಕಿನ ಸಕ್ರೆಬೈಲಿನಲ್ಲಿರುವ ಅರಣ್ಯ ಇಲಾಖೆಗೆ ಸೇರಿದ ಆಯುರ್ವೇದ ಸಸ್ಯಗಳ ಸಂರಕ್ಷಣೆಯ ಅಶ್ವನಿ ವನ ನಿರ್ಮಾಣದ ಸಲುವಾಗಿ ಎಷ್ಟು ಹಣ ವ್ಯಯಿಸಲಾಗಿರುತ್ತದೆ; ಸೂಕ್ತ ಮೇಲ್ವಿಚಾರಣಾ ಸಿಬ್ಬಂದಿ ನೇಮಿಸಲಾಗಿದೆಯೆ ಹಾಲಿ ಈ ಅಶ್ವಿನಿವನದ ಪಾಲನೆ ಸರಿಯಾಗಿ ನಡೆಯುತ್ತಿದೆಯೇ? (ವಿವರ ನೀಡುವುದು).

ಆ) ಶಿವಮೊಗ್ಗ ತಾಲ್ಲೂಕಿನ ವಿವಿಧ ಅರಣ್ಯ ಉತ್ಪನ್ನಗಳ ಕೋಠಿಯಲ್ಲಿ ದಾಸ್ತಾನು ಮಾಡಲಾಗಿರುವ ಮರದ ದಿಮ್ಮಿಗಳ ಹರಾಜಿನಿಂದ ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಇಲಾಖೆಗೆ ಬಂದ ಆದಾಯವೆಷ್ಟು?

ಇ) ಸಕ್ರೆಬೈಲು ಆನೆ ಬಿಡಾರದಲ್ಲಿ ಸಾರ್ವಜನಿಕ ಆನೆ ಸವಾರಿಗೆ ಸಂಬಂಧಿಸಿದ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ? (ವಿವರ ನೀಡುವುದು).

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಹಿಂದಿನ 7 ವರ್ಷಗಳಲ್ಲಿ 25.582 ಲಕ್ಷ ರೂ.ಗಳ ವೆಚ್ಚವಾಗಿರುತ್ತದೆ. ಮೇಲ್ವಿಚಾರಣಾ ಸಿಬ್ಬಂದಿ ನೇಮಿಸಲಾಗಿದೆ. ಪರಿಪಾಲನೆ ಸರಿಯಾಗಿ ನಡೆಯುತ್ತಿದೆ.

ಆ) 1999-2000 ರೂ. 150.810 ಲಕ್ಷ

2000-2001 ರೂ. 257.956 ಲಕ್ಷ

2001-2002 ರೂ. 273.390 ಲಕ್ಷ

ಇ) ಇರುವುದಿಲ್ಲ.

ಕೊರಟಗೆರೆ ವ್ಯಾಪ್ತಿಯ ದೇವಾಲಯಗಳ ಜೀರ್ಣೋದ್ಧಾರ ಕಾರ್ಯಕ್ಕೆ ಅನುದಾನ ಬಿಡುಗಡೆ

1210(716) ಶ್ರೀ ಚನ್ನಿಗಪ್ಪ ಸಿ.(ಕೊರಟಗೆರೆ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?